NP – 001

I SEM B.A.

೨

# ಮೊದಲನೆ ಸೆಮಿಸ್ಟರ್ ಬಿ.ಎ. ಪರೀಕ್ಷೆ, ಮಾರ್ಚ್/ಏಪ್ರಿಲ್ 2023
## (NEP) (2021-22 and Onwards) (F+R)
## ಕನ್ನಡ ಭಾಷಾ ಪತ್ಯ (Paper – 1)
## ಕಲಾ ಕನ್ನಡ

St Claret College LIBRARY Bangalore-560013

Time : 2½ Hours | Max. Marks : 60

I. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**ಎಂಬತ್ತು** ಪದಗಳನ್ನು ಮೀರದಂತೆ): **(4×5=20)**

1) ಮಕ್ಕಳ ಶಿಕ್ಷಣದಲ್ಲಿ ತಾರತಮ್ಯ ಮಾಡುವುದು ಸರಿಯೇ ? ವಿಶ್ಲೇಷಿಸಿ.

2) ಮುಕ್ತ ತಂತ್ರಾಂಶದಿಂದ ಆಗುವ ಪ್ರಯೋಜನಗಳೇನು ? ತಿಳಿಸಿ.

3) ಬಿದಿರು ಹೂ ಬಿಟ್ಟಿತ್ತೆಂದರೆ ಜನ ಭಯಭೀತರಾಗಲು ಕಾರಣವೇನು ?

4) ಮೈಮೇಲೆ ದೇವರು ಬರುವ ಪ್ರಸಂಗದ ಸ್ವಾರಸ್ಯವನ್ನು ತಿಳಿಸಿ.

5) ಸಂವಿಧಾನದ ಮೂಲಭೂತ ಆಶಯಗಳು ಯಾವುವು ?

6) ಸರ್ವೋದಯ ಸಿದ್ಧಾಂತವನ್ನು ಕುರಿತು ಬರೆಯಿರಿ.

II. **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ (**ನೂರ ಅರವತ್ತು** ಪದಗಳು ಮೀರದಂತೆ): **(2×10=20)**

1) ರತ್ನನ ಕನ್ನಡಾಭಿಮಾನ ''ಕನ್ನಡ ಪದಗೋಳ್'' ಕಾವ್ಯ ಭಾಗದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

2) ಪರ್ಷಿಯನ್ ಕೊಲ್ಲಿಯ ಜೈವಿಕ ಜೀವಗಳ ನಾಶಕ್ಕೆ ಕಾರಣವೇನು ? ವಿವರಿಸಿ.

3) ಸಾರಾ ಅವರ್‍ು ಹೈಸ್ಕೂಲಿಗೆ ಹೋಗುತ್ತಿದ್ದಾಗ ಬಂಧುಮಿತ್ರರ ಪ್ರತಿಕ್ರಿಯೆ ಹೇಗಿತ್ತು ? ವಿವರಿಸಿ.

III. ಕೆಳಗಿನ ಪತ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ನೀಡಿ. **(3×1=3)**

ಒಂದು ಪ್ರದೇಶದ ಇತಿಹಾಸವು ಕೇವಲ ಕೆಲವೇ ಗಣ್ಯರಿಂದ ಪ್ರಭಾವಿತವಾಗಿರುವುದಿಲ್ಲ. ಗಣ್ಯರದ್ದೇ ಆದ ಇತಿಹಾಸವು ಎಲೈಟ್ ಇತಿಹಾಸ ಎನಿಸಿಕೊಳ್ಳುತ್ತದೆ. ಆಗ ಸಮಾಜಕ್ಕೆ ಕೆಳವರ್ಗದವರ ಕೊಡುಗೆ ಗಣನೆಗೇ ಬರುವುದಿಲ್ಲ. ಸೈನಿಕರನ್ನು ಸಬಾಲ್ಟರ್ನ್ ಎಂದು ಕರೆಯಲಾಗುತ್ತಿತ್ತು ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಯುದ್ಧ ಗೆದ್ದವನು ರಾಜನಾದರೂ ಹೋರಾಡಿ, ಗೆಲುವು ತಂದುಕೊಟ್ಟವನು ಸೈನಿಕ ಎನ್ನುವುದನ್ನು ತಳ್ಳಿ

ಹಾಕಲಾಗುವುದಿಲ್ಲ. ದುಡಿಮೆಯ ಕಾರಣದಿಂದ ಆದ ವಲಸೆಯು ಸಂಸ್ಕೃತಿಯ ವಲಸೆಗೂ ದಾರಿ ಮಾಡಿತು. ಆಗ ಸೃಷ್ಟಿಯಾದದ್ದು ಅಸ್ಮಿತೆಯ ಸಮಸ್ಯೆ. ಇಂತಹ ಸಮಸ್ಯೆಗಳ ಕಾರಣದಿಂದಲೇ ಸಂಸ್ಕೃತಿಯ ಅಧ್ಯಯನವು ಸಬಾಲ್ಟರ್ನ್ ಚರಿತ್ರೆಯಲ್ಲಿ ಪ್ರಾಮುಖ್ಯತೆ ಪಡೆಯಿತು. ಕೈಗಾರಿಕೆಗಳನ್ನು ಆಶ್ರಯಿಸಿದ ಕಾರ್ಮಿಕ ವರ್ಗ, ಭೂಮಿಯನ್ನು ಆಶ್ರಯಿಸಿದ ಅಸಂಘಟಿತ ರೈತ ವರ್ಗದ ಸಮಸ್ಯೆಗಳು ಹೆಚ್ಚಾಗುತ್ತಲೇ ಇದ್ದಾಗ, ತಂತ್ರಗಾರಿಕೆ ಮತ್ತು ಸಂಸ್ಕೃತಿಗಳ ನಡುವೆ ಸಂಘರ್ಷ ಸಹಜವಾಗಿಯೇ ಇತ್ತು. ಇವೆಲ್ಲವುಗಳ ಹಿನ್ನೆಲೆಯಲ್ಲಿ ಗ್ರಾಂಶಿಯ ವಿಚಾರಗಳ ಅರ್ಥ ವಿಸ್ತಾರಗೊಂಡು ಸಬಾಲ್ಟರ್ನ್ ಹೆಸರಿನಲ್ಲಿ ಕೆಳಸ್ತರದ ಚರಿತ್ರೆ ಬೆಳೆದು ಬಂದಿದೆ. ಉಳ್ಳವರು ಮತ್ತು ಇಲ್ಲದವರ ನಡುವಿನ ಸಮಸ್ಯೆಗಳೇ ಕೆಳಸ್ತರದ ಚರಿತ್ರೆಯ ಅಧ್ಯಯನಕ್ಕೆ ಪ್ರೇರಣೆಯಾಗಿದೆ. (97 ಪದಗಳು)

IV. ಸಂಕ್ಷೇಪಿಸಿದ ಬರಹ ಆಧರಿಸಿ **ಎರಡು** ಪ್ರಶ್ನೆಗಳನ್ನು ರೂಪಿಸಿ. **(2×1=2)**

V. ಇವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(2×1=2)**

1) ಪರಮಾನಂದ
2) ಅಗ್ರಸ್ಥಾನ
3) ತಾರತಮ್ಯ
4) ದಂಗು ಬಡಿ.

VI. ಕಾಲೇಜಿನ ಗ್ರಂಥಾಲಯಕ್ಕೆ ಪರಿಷತ್ತಿನ ಪ್ರಕಟಣೆಯ ಪುಸ್ತಕಗಳನ್ನು ಕಳುಹಿಸುವಂತೆ ಕೋರಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ. **(1×4=4)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ : **(1×4=4)**

1) ಪಾರುಪತ್ಯ
2) ಹಿಂಡು
3) ಪ್ರಭೇದ
4) ಪಾತಕ
5) ರಿವಾಜು
6) ಇಂಟರ್‌ನೆಟ್.

VIII. ಇವುಗಳಿಗೆ ಸರಿ ಉತ್ತರವನ್ನು ಗುರುತಿಸಿ ಬರೆಯಿರಿ : **(1×5=5)**

1) ವಿಶ್ವ ಪರಿಸರ ದಿನವನ್ನು ಪ್ರತಿ ವರ್ಷ ಎಂದು ಆಚರಿಸಲಾಗುತ್ತದೆ ?

ಅ) ಫೆಬ್ರವರಿ 5 ಆ) ಜೂನ್ 5

ಇ) ಆಗಸ್ಟ್ 5 ಈ) ಜುಲೈ 5

2) ಹೊಸ ಆರ್ಥಿಕ ನೀತಿಯ ಎಲ್ಲಾ ಅವಕಾಶಗಳನ್ನು ತನ್ನದಾಗಿಸಿಕೊಂಡ ವರ್ಗ ಯಾವುದು ?

ಅ) ಶ್ರೀಮಂತ ವರ್ಗ ಆ) ಕೆಳ ವರ್ಗ

ಇ) ಮಧ್ಯಮ ವರ್ಗ ಈ) ಬಡ ವರ್ಗ

3) ನಾವು ಯಾವುದರ ಕನಸು ಕಾಣಬೇಕೆಂದು ಕವಿ ಹೇಳುತ್ತಾರೆ ?

ಅ) ಭೂಮಿ ಆ) ಹಣ

ಇ) ಹೊನ್ನು ಈ) ಆಕಾಶ

4) ಸರ್ವೋದಯ ಕಾರ್ಯವನ್ನು ಅಂತ್ಯೋದಯದಿಂದ ಆರಂಭಿಸಬೇಕು ಎಂದವರು ಯಾರು ?

ಅ) ಗಾಂಧೀಜಿ ಆ) ಜಾನ್ ರಸ್ಕಿನ್

ಇ) ವಿನೋಬಾ ಭಾವೆ ಈ) ಹೆಚ್. ಎಸ್. ದೊರೆಸ್ವಾಮಿ

5) ಕೆಳಸ್ತರದ ಇತಿಹಾಸ ರಚನೆಯ ಪಿತಾಮಹ ಎಂದು ಕರೆಯಲ್ಪಡುವವರು

ಅ) ಡಾ. ಸಿ. ಆರ್. ಶ್ಯಾಮಲಾ ಆ) ರಂಜಿತ್ ಗುಹಾ

ಇ) ಡಾ. ವಿಜಯ ಪುಣಚ್ಚತಂಬಂಡ ಈ) ಡಾ. ಡಿ. ಎನ್. ಯೋಗೀಶ್ವರಪ್ಪ